ಗಜಾಧರ ಶರ್ಮಾ ಟೇಪಚೂನ ಚಡ್ಡಿಯನ್ನು ಎಳೆದಾಗ ಇನ್‌ಸ್ಪೆಕ್ಟರ್ ಕರೀಮ್ ಬಖ್ಷ್‌ನ ಮುಖ ಕಳೆಗುಂದಿತು. ಟೇಪಚೂಗೆ ನಿಯಮಾನುಸಾರ ಫಿರೋಜಾ ಸುನ್ನತಿ ಮಾಡಿಸಿದ್ದಳು.

ಟೇಪಚೂಗೆ ಇನ್‌ಸ್ಪೆಕ್ಟರ್‌ನ ಹೆಸರು ಗೊತ್ತಿರಲಿಲ್ಲ. ಆದರೆ, ಅವನ ಮುಖ ನೋಡಿ ತಿಳಿದ. ಇನ್‌ಸ್ಪೆಕ್ಟರ್ ಕರೀಮ್ ಬಖ್ಷ್, ಟೇಪಚೂನ ಗಂಡಸ್ಥಳಕ್ಕೆ ದೊಣ್ಣೆಯಿಂದ ಹೊಡೆದು ಕೇಳಿದ, 'ಸೂ... ಮಗನೇ, ಏನ್ ನಿನ್ನ ಹೆಸರು?'

ಟೇಪಚೂ ಅಂಗಿಯನ್ನು ಕಳಚಿ ಎಸೆದು ನಗ್ನಾವಸ್ಥೆಯಲ್ಲಿ ನಿಂತು ಹೇಳಿದ, 'ಅಲ್ಲಾ ಬಕ್ಸ್ ವಲದ್ ಅಬ್ದುಲ್ಲಾ ಬಕ್ಸ್ ಊರು ಮಡರ್ ಮೌಜಾ ಪೌಂಡಿ, ತಾಲ್ಲೂಕು ಸೋಹಾಗಪುರ, ಠಾಣೆ ಜೈತಹರಿ, ಉದ್ಯೋಗ ಕೂಲಿ.' ನಂತರ ಅವನು ಕಾಲುಗಳನ್ನು ಅಗಲ ಮಾಡಿ ಹೊರಳಿದ; ಗಜಾಧರ ಶರ್ಮಾ ಆಗ ಕೆಳಗೆ ಬಾಗಿದ್ದ, ಟೇಪಚೂ ಅವನ ಹೆಗಲ ಮೇಲೆ ಮೂತ್ರ ವಿಸರ್ಜನೆ ಮಾಡಿ ಹೇಳಿದ, 'ಜಿಲ್ಲೆ ಶಹಡೋಲಾ, ನಿವಾಸ ಬೈಲಾಡಿಲಾ...'

ಟೇಪಚೂನನ್ನು ಜೀಪಿನ ಹಿಂಭಾಗಕ್ಕೆ ಹಗ್ಗದಿಂದ ಕಟ್ಟಿ ಒಂದೂವರೆ ಮೈಲಿಗಳವರೆಗೆ ಎಳೆದುಕೊಂಡು ಹೋಗಲಾಯಿತು. ರಸ್ತೆಯಲ್ಲಿ ಹರಡಲಾಗಿದ್ದ ಜಲ್ಲಿಕಲ್ಲು ಮತ್ತು ಮಣ್ಣಿನಿಂದಾಗಿ ಅವನ ಬೆನ್ನಿನ ಚರ್ಮ ಸುಲಿದು ಬಂತು. ಕೆಂಪು ಟೊಮೇಟೋದಂತೆ ಅಲ್ಲಲ್ಲಿ ಅವನ ಬೆನ್ನಿನ ಮಾಂಸ ಹೊರಗೆ ಇಣಿಕಿ ನೋಡಲಾರಂಭಿಸಿತು.

ಜೀಪು ಹಳ್ಳಿಯನ್ನು ದಾಟಿ ಕೊನೆಯ ಸುಂಕದ ದ್ವಾರದಲ್ಲಿ ನಿಂತಿತು. ಪೊಲೀಸರ ಗುಂಪು ಕ್ರೂರ ಪ್ರಾಣಿಗಳಂತೆ ಸಿಟ್ಟಿನಿಂದ ಬುಸುಗುಟ್ಟುತ್ತಿತ್ತು. ಸುಂಕದ ಕಟ್ಟೆಯ ಬಳಿ ಒಂದು ಢಾಬಾ ಇತ್ತು. ಪೊಲೀಸರು ಅಲ್ಲಿಯೇ ಚಹಾ ಕುಡಿಯಲು ಕೂತರು.

ಟೇಪಚೂಗೂ ಸಹ ಚಹಾ ಕುಡಿಯಬೇಕೆಂದು ಮನಸ್ಸಾಯಿತು, 'ಏಯ್ ಮಾಣಿ, ನನಗೂ ಒಂದು ಕಡಕ್ ಚಹಾ ಕೊಡಪ್ಪಾ' ಎಂದು ಅವನು ಕೂಗಿ ಹೇಳಿದ. ಪೊಲೀಸರು ಪರಸ್ಪರ ಓರೆಗಣ್ಣುಗಳಲ್ಲಿ ನೋಡಿಕೊಳ್ಳುತ್ತಾ ಮುಗುಳ್ನಕ್ಕರು. ಟೇಪಚೂಗೆ ಚಹಾವನ್ನು ಕುಡಿಸಲಾಯಿತು. ಅವನ ಗಂಡಸ್ಥಳದಲ್ಲಿ ಬಾವು ಬಂದಿತ್ತು. ಇಡೀ ಶರೀರ ಶವದಂತಾಗಿತ್ತು. ಅಲ್ಲಲ್ಲಿ ರಕ್ತ ಒಸರುತ್ತಿತ್ತು.

ಜೀಪು ಸುಮಾರು ಹತ್ತು ಮೈಲುಗಳ ನಂತರ ಕಾಡಿನ ನಡುವೆ ನಿಂತಿತು. ಅದು ನಿರ್ಜನ ಜಾಗವಾಗಿತ್ತು. ಟೇಪಚೂನನ್ನು ಕೆಳಗಿಳಿಸಲಾಯಿತು. ಗಜಾಧರ ಶರ್ಮಾ ಅವನಿಗೆ ದೊಣ್ಣೆಯಿಂದ ಮತ್ತೆ ಎರಡು ಬಾರಿ ಹೊಡೆದ. ಇನ್‌ಸ್ಪೆಕ್ಟರ್ ಕರೀಮ್ ಬಖ್ಷ್ ಜೀಪಿನಿಂದಿಳಿದು ಟೇಪಚೂಗೆ ಹೇಳಿದ, 'ಅಲ್ಲಾ ಬಕ್ಸ್ ಉರ್ಫ್ ಟೇಪಚೂ, ನಿನಗೆ ಹತ್ತು ನಿಮಿಷಗಳ ಸಮಯವನ್ನು ಕೊಡಲಾಗುವುದು. ನಿನ್ನನ್ನು ಗಡಿಪಾರು ಮಾಡಲು ಸರ್ಕಾರದ ಆದೇಶ ಸಿಕ್ಕಿದೆ. ಎದುರಿನ ರಸ್ತೆಯಲ್ಲಿ ನೀನೆಷ್ಟು ದೂರ ವೇಗವಾಗಿ ಓಡಲು ಸಾಧ್ಯವೋ, ಓಡಿಹೋಗು. ನಾವು ಹತ್ತರವರೆಗೆ ಎಣಿಕೆ ಮಾಡುತ್ತೇವೆ.'

ಟೇಪಚೂ ಕುಂಟುತ್ತಾ ಹೊರಟ. ಕರೀಮ್ ಬಖ್ಷ್ ಖುದ್ದು ಎಣಿಕೆ ಮಾಡುತ್ತಿದ್ದ. ಒಂದು-ಎರಡು-ಮೂರು-ನಾಲ್ಕು-ಐದು...

ರಕ್ತಮಯವಾಗಿದ್ದ ಟೇಪಚೂ ಕುಂಟ ಮತ್ತು ರೋಗಗ್ರಸ್ತ ಎತ್ತಿನಂತೆ ತನ್ನನ್ನು ತಾನು ಎಳೆದುಕೊಂಡು ಹೋಗುತ್ತಿದ್ದ. ಅವನಿಗೆ ನಿಲ್ಲಲೂ ಸಾಧ್ಯವಿರಲಿಲ್ಲ, ಇನ್ನು ಓಡುವ ಮಾತೆಲ್ಲಿ ಬಂತು!

ಅಕಸ್ಮಾತ್ ಹತ್ತರವರೆಗೆ ಎಣಿಕೆ ಮುಗಿಯಿತು. ತೂಫಾನಿ ಸಿಂಗ್ ಗುರಿಯಿಟ್ಟು ಗುಂಡು ಹಾರಿಸಿದ.

ಗುಂಡು ಟೇಪಚೂನ ಸೊಂಟಕ್ಕೆ ತಗಲಿತು. ಅವನು ಮರಳಿನ ಚೀಲದಂತೆ ಕೆಳಗೆ ಬಿದ್ದ. ಕೆಲವು ಪೊಲೀಸರು ಅವನ ಬಳಿಗೆ ಬಂದರು. ಅವನ ಗಂಡಸ್ಥಳಕ್ಕೆ ಬೂಟಿನಿಂದ ಒದ್ದರು. ಟೇಪಚೂ ನರಳುತ್ತಾ ನಿಂದಿಸಿದ, 'ಸೂಳೆ ಮಕ್ಕಾ!'

ಗಜಾಧರ ಶರ್ಮಾ ಇನ್‌ಸ್ಪೆಕ್ಟರ್ ಗೆ ಹೇಳಿದ, 'ಸಾರ್, ಇನ್ನೂ ಜೀವವಿದೆ.'

ಇನ್‌ಸ್ಪೆಕ್ಟರ್ ಕರೀಮ್ ಬಖ್ಷ್, ತೂಫಾನಿ ಸಿಂಗ್‌ಗೆ ಸಂಜ್ಞೆ ಮಾಡಿದ. ತೂಫಾನಿ ಸಿಂಹ ಟೇಪಚೂನ ಸಮೀಪಕ್ಕೆ ಹೋಗಿ, ಅವನ ಎರಡೂ ಹೆಗಲುಗಳ ಬಳಿ, ಎರಡೆರಡು ಇಂಚು ಕೆಳಗೆ ಎರಡು ಬಂದೂಕಿನ ನಳಿಗೆಯನ್ನು ಚುಚ್ಚಿ, ಗುಂಡುಗಳನ್ನು ಹಾರಿಸಿದ. ಕೆಳಗಿದ್ದ ನೆಲ ಕಂಪಿಸಿತು.

ಟೇಪಚೂನ ಬಾಯಿಯಿಂದ ರಕ್ತ ಮತ್ತು ನೊರೆ ಹೊರ ಬಂದಿತು. ನಾಲಿಗೆ ಹೊರಗೆ ಚಾಚಿತು. ಕಣ್ಣುಗಳು ಹೊರಳಿ ಮುಚ್ಚಿಕೊಂಡವು, ಕಡೆಗೆ ಅವನು ತಣ್ಣಗಾದ.